ಹಾಲಿವುಡ್

# ಜಾಂಗೊ: ಅಚ್ಚರಿಯ ಪಯಣ



ಈ ವರ್ಷ ಆಸ್ಕರ್ ಪ್ರಶಸ್ತಿಗೆ 'ಲೈಫ್ ಆಫ್ ಪೈ' ಚಿತ್ರದೊಂದಿಗೆ ಹತ್ತಿರದ ಸೆಣೆಸಾಟ ನಡೆಸಿ ಹೆಚ್ಚಿನ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಳ್ಳುವ ಭರವಸೆ ಮೂಡಿಸಿದ್ದ ಚಿತ್ರ ಕ್ವೆಂಟಿನ್ ಟೆರಾಂಟಿನೊ ನಿರ್ದೇಶನದ 'ಜಾಂಗೊ ಅನ್‌ಚೈನ್ಡ್'. ನಿರೀಕ್ಷಿಸಿದ್ದಷ್ಟು ಪ್ರಶಸ್ತಿಗಳು ಬಾರದಿದ್ದರೂ ಅತ್ಯುತ್ತಮ ಮೂಲ ಚಿತ್ರಕಥೆ ಮತ್ತು ಅತ್ಯುತ್ತಮ ಪೋಷಕ ನಟ (ಕ್ರಿಸ್ಟೋಫ್ ವಾಲ್ಟ್ಸ್) ಹಿರಿಮೆ ಈ ಚಿತ್ರಕ್ಕೆ ದೊರೆತವು. ಮಾತ್ರವಲ್ಲ, ವಿಶ್ವದಾದ್ಯಂತ ಚಿತ್ರವಿಮರ್ಶಕರಿಂದ ಅಪಾರ ಮೆಚ್ಚುಗೆಯನ್ನೂ ಗಳಿಸಿತು.

1860ರಲ್ಲಿ ಅಮೆರಿಕದಲ್ಲಿ ನಡೆದ ನಾಗರಿಕ ಯುದ್ಧಕ್ಕೂ ಹಿಂದಿನ ಸಾಮಾಜಿಕ ಪರಿಸ್ಥಿತಿಯನ್ನು ವಿಶ್ಲೇಷಿಸುವ ಮತ್ತು ಅದರ ಮೂಲಕ ಇಂದಿನ ವೀಕ್ಷಕರಿಗೆ ಬೇಕಾದ ಮನರಂಜನೆ ಬೆರೆತ ಸಾಹಸಗಾಥೆಯನ್ನು ತೆರದಿಡುವ ವಿಶಿಷ್ಟ ಪ್ರಯತ್ನ ಈ ಚಿತ್ರದ್ದು. ಬಿಳಿಯರ ಗುಲಾಮಗಿರಿಯ ವಿರುದ್ಧ ಸಿಡಿದೇಳುವ ನೀಗ್ರೊ ಜನಾಂಗದ ಪ್ರತಿನಿಧಿಯ ಪಾತ್ರವಾಗಿ ಜಾಮಿ ಫಾಕ್ಸ್ ಕಾಣಿಸಿಕೊಂಡಿದ್ದಾರೆ.

'ಜಾಂಗೊ' ಸರಣಿಯ ಮೊದಲ ಚಿತ್ರ ಬಂದಿದ್ದು 1966ರಲ್ಲಿ. ಸ್ಟೆರ್ಗಿಯೊ ಕೊರ್ಬುಚ್ಚಿ ಈ ಚಿತ್ರವನ್ನು ನಿರ್ದೇಶಿಸಿದ್ದರು. ಇಟಲಿಯ ನಟ ಫ್ರಾಂಕ್ ನೇರೊ 'ಜಾಂಗೊ' ಆಗಿ ಕಾಣಿಸಿಕೊಂಡಿದ್ದರು. ಈಗ 70ನೇ ಹರೆಯದಲ್ಲಿರುವ ನೇರೊರನ್ನು ಜನ ಗುರುತಿಸುವುದು 'ಜಾಂಗೊ' ಎಂದೇ! ಹಿಂಸೆಯ ವೈಭವೀಕರಣದ ಕಾರಣಕ್ಕೆ ಅನೇಕ ರಾಷ್ಟ್ರಗಳು ಈ ಚಿತ್ರದ ಬಿಡುಗಡೆಗೆ ಅನುಮತಿ ನೀಡಿರಲಿಲ್ಲ. ಕಳೆದ ನಾಲ್ಕು ದಶಕದಲ್ಲಿ ಇದೇ ಕಥನವನ್ನು ಆಧರಿಸಿದ ನೂರಾರು ಚಿತ್ರಗಳು ತೆರೆ ಕಂಡಿವೆ. ಆದರೆ ಅಧಿಕೃತವಾಗಿ ತೆರೆ ಕಂಡದ್ದು 1987ರಲ್ಲಿ ನೆಲ್ಲೊ ರೊಸೆಟ್ಟಿ ನಿರ್ದೇಶಿಸಿದ 'ಜಾಂಗೊ 2: ಸ್ಟ್ರೈಕ್ಸ್ ಅಗೈನ್' ಮಾತ್ರ. 'ಜಾಂಗೊ ಅನ್‌ಚೈನ್ಡ್'ನಲ್ಲಿ ಫ್ರಾಂಕ್ ನೇರೊ ಪುಟ್ಟ ಪಾತ್ರದಲ್ಲಿ ಕಾಣಿಸಿಕೊಂಡಿರುವುದು ವಿಶೇಷ.

■ ಅಮಿ


